# ಹೇಮಂತ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಹೇಮಂತರಾಜನು ಇಳೆಗೆ ಬಂದಾಗ ಮರಗಳು ಹೇಗಿರುತ್ತವೆ?

ಉ: ಹೇಮಂತರಾಜನು ಇಳೆಗೆ ಬಂದಾಗ ಮರಗಳು ಹೂವು, ಹಸಿರು, ಚಿಗುರೆಲೆಗಳು ಇಲ್ಲದೆ ಬರಿದಾಗುತ್ತವೆ.

೨. ಮಂಜು ಮುಸುಕನು ಹೊದ್ದು ಮಲಗಿರುವವರು ಯಾರು?

ಉ: ಮಂಜು ಮುಸುಕನು ಹೊದ್ದು ಮಲಗಿರುವವರು ಹೊಲಗದ್ದೆಗಳು.

೩. ಕಾನನದ ಹಕ್ಕಿ ಏನು ಮಾಡುತ್ತಿದೆ?

ಉ: ಕಾನನದ ಹಕ್ಕಿ ಕಣ್ಣೀರು ಸುರಿಸುತ್ತಿವೆ.

೪. ಎತ್ತಲೂ ಕಾಣುತ್ತಿರುವ ದೃಶ್ಯ ಯಾವುದು?

ಉ:ಎತ್ತಲೂ ಕಾಣುತ್ತಿರುವ ದೃಶ್ಯ ಬಿಳಿಮಂಜು ಮತ್ತು ಹಿಮಗಾಳಿ.

೫. ಹೇಮಂತ ಋತುವಿನಲ್ಲಿ ತುಂಗೆಯ ತೊರೆ ಹೇಗೆ ಹರಿಯುತ್ತಿದೆ?

ಉ: ಹೇಮಂತ ಋತುವಿನಲ್ಲಿ ತುಂಗೆಯ ತೊರೆ ನಡುಗಿ ಮೈನೆನೆದು ಹರಿಯುತ್ತಿದೆ.

೬. ಯಾವುದಕ್ಕೆ ತಲೆಬಾಗಬೇಕೆಂದು ಕವಿ ಹೇಳುತ್ತಾರೆ?

ಉ: ಸೃಷ್ಟಿಯು ಹೇಮಂತ ಋತುವಿನಗೆ ತಲೆಬಾಗಬೇಕೆಂದು ಕವಿ ಹೇಳುತ್ತಾರೆ.

FOR KANNADA
ಕನ್ನಡಕ್ಕೆ ಇಲ್ಲಿ ಬನ್ನಿ

೭. ಜೀವಗಳ ಧರ್ಮ ಯಾವುದು?

ಉ: ಸಂಸ್ಕಾರ ಪಡೆಯುವುದೇ ಜೀವಗಳ ಧರ್ಮ.

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧.ಹೇಮಂತನು ಬಂದಿಳಿದಾಗ ಲೋಕದ ಪರಿಸ್ಥಿತಿ ಹೇಗಿತ್ತು?

ಉ: ಹೇಮಂತನು ಬಂದಿಳಿದಾಗ ಲೋಕದ ಮರಗಿಡಗಳಲ್ಲಿ ಹೂವು, ಹಸಿರು ಇರಲಿಲ್ಲ. ಚಿಗುರೆಲೆಗಳು ಇರಲಿಲ್ಲ. ದುಂಬಿಗಳ ಧ್ವನಿಯು ಹಕ್ಕಿಯ ಹಾಡು ಇರಲಿಲ್ಲ. ಕುಸುಮದ ಗಂಧವು ಇರಲಿಲ್ಲ.

೨. ಹೊಲಗದ್ದೆಗಳು ಮತ್ತು ನದಿಗಳ ಮೇಲೆ ಹೇಮಂತನ ಪ್ರಭಾವ ಏನು?

ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿವೆ. ನದಿಯು ಮೆಲ್ಲನೆ ಸರಿಯುತ್ತಾ ಮುಖದ ಪರದೆಯನ್ನು ಎಳೆದುಕೊಂಡು ಮೈ ನೆನೆದು ನಡಗುತ್ತಾ ಹರಿಯುತ್ತಿದೆ. ಇದು ಹೊಲಗದ್ದೆಗಳ ಮೇಲೆ ಮತ್ತು ನದಿಗಳ ಮೇಲೆ ಹೇಮಂತನು ಮಾಡಿರುವ ಪ್ರಭಾವ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೩. ಹೇಮಂತ ಋತುವಿನಲ್ಲಿ ಮರಗಳ ಸ್ಥಿತಿ ಹೇಗಿರುತ್ತದೆ?

ಹೇಮಂತ ಋತುವಿನಲ್ಲಿ ಮರಗಳ ಎಲೆಗಳು ಹಣ್ಣಾಗಿ ಉದುರುತ್ತವೆ. ಹೂವು, ಹಸಿರು, ಚಿಗುರೆಲೆಗಳಿಲ್ಲದೇ ಮರ ಬೋಳಾಗುತ್ತವೆ. ಮರಗಳ ಸ್ಥಿತಿ ನೋಡಿ ಕಾನನದ ಹಕ್ಕಿ ಕಣ್ಣೀರು ಸುರಿಸುತ್ತದೆ. ಹೀಗೆ ಹೇಮಂತ ಋತುವಿನಲ್ಲಿ ಮರಗಳ ಸ್ಥಿತಿ ಇರುತ್ತದೆ.

೪. ಹೇಮಂತನ ಕಠಿಣ ಶಾಸನವನ್ನು ಹೇಗೆ ಸ್ವೀಕರಿಸಬೇಕು?

ಮನುಷ್ಯನ ಬದುಕು ಸದಾ ಸಂಭ್ರಮದ ವಸಂತ ಋತುವೇ ಆಗಿರುವುದಿಲ್ಲ. ಕೆಲವೊಮ್ಮೆ ಬಾಳಿನಲ್ಲಿ ಕಷ್ಟ ನಷ್ಟಗಳು ಬರುತ್ತವೆ. ಆದ್ದರಿಂದ ವಿಧಿಯನ್ನು ಶಪಿಸಬಾರದು. ಹೇಮಂತನ ಕಠಿಣ ಶಾಸನವನ್ನು ಪ್ರಕೃತಿಯ ನಿಯಮ ಎಂದು ಸ್ವೀಕರಿಸಬೇಕು. ಹೊಸ ಕಾಲಕ್ಕೆ ಮನುಷ್ಯ ಕಾಯಬೇಕು.

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಹೇಮಂತನ ಋತುವಿನಲ್ಲಿ ಪ್ರಕೃತಿಯು ಹೇಗಿರುತ್ತದೆ ಎಂಬುದನ್ನು ವರ್ಣಿಸಿ.

ಹೇಮಂತ ಋತುವಿನಲ್ಲಿ ಮರಗಳ ಎಲೆಗಳು ಹಣ್ಣಾಗಿ ಉದುರುತ್ತವೆ. ಹೂವು, ಹಸಿರು, ಚಿಗುರೆಲೆಗಳಿಲ್ಲದೇ ಮರ ಬೋಳಾಗುತ್ತವೆ. ಮರಗಳ ಸ್ಥಿತಿ ನೋಡಿ ಕಾನನದ ಹಕ್ಕಿ ಕಣ್ಣೀರು ಸುರಿಸುತ್ತದೆ. ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿವೆ. ನದಿಯು ಮೆಲ್ಲನೆ ಸರಿಯುತ್ತಾ ಮುಖದ ಪರದೆಯನ್ನು ಎಳೆದುಕೊಂಡು ಮೈ ನೆನೆದು ನಡಗುತ್ತಾ ಹರಿಯುತ್ತಿದೆ. ಈ ಕಾಲದಲ್ಲಿ ದುಂಬಿಗಳ ದನಿಯಿರುವುದಿಲ್ಲ. ಹಕ್ಕಿಗಳ ಹಾಡಿರುವುದಿಲ್ಲ. ಹೂವಿನ ಗಂಧವನ್ನು ತರುವ ಗಾಳಿ ಇರುವುದಿಲ್ಲ. ತಂಪಾದ ಗಾಳಿಯಲ್ಲಿ ಮಾನವನ ಜೀವ ಸೆರೆಸಿಕ್ಕಿದಂತೆ ಇರುತ್ತದೆ. ಎಲ್ಲೆಲ್ಲೂ ಬಿಳಿಮಂಜು, ಹಿಮಗಾಳಿ. ಎಷ್ಟೋ ಪ್ರಾಣಿಗಳು ಜಡಾವಸ್ಥೆಗೆ ಹೋಗುತ್ತವೆ. ಹೇಮಂತನ ಋತುವಿನಲ್ಲಿ ಪ್ರಕೃತಿಯು ಹೀಗಿರುತ್ತದೆ.

**ಈ. ಈ ಕೆಳಗಿನ ವಾಕ್ಯಗಳ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ.**

೧. ಚೆಂಗುಡಿಯ ಸಿಂಗರದ ವರವರೂಥಗಳೆನಿಸಿ

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎಸ್. ವಿ. ಪರಮೇಶ್ವರ ಭಟ್ಟರು ಬರೆದ 'ಗಗನಚುಕ್ಕಿ' ಎಂಬ ಕವನ ಸಂಕಲನದಿಂದ ಆಯ್ದ 'ಹೇಮಂತ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸ್ವಾರಸ್ಯ:** ಹೇಮಂತ ಋತುವಿನ ಕಾಲದಲ್ಲಿ ಪ್ರಕೃತಿಯಲ್ಲಿ ಜಡತ್ವವು ತುಂಬಿರುತ್ತದೆ. ಮರಗಿಡಗಳು ಚಿಗುರೆಲೆಗಳನ್ನು ಕಳೆದುಕೊಂಡು ಬೋಳಾಗಿರುತ್ತದೆ ಎಂಬುದು ಇಲ್ಲಿಯ ಸ್ವಾರಸ್ಯವಾಗಿದೆ.

೨. ಸುಯ್ಯೆಲ್ಲರ ಸೂಸುತಿವೆ ನಿನ್ನ ಹಳಿದು

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎಸ್. ವಿ. ಪರಮೇಶ್ವರ ಭಟ್ಟರು ಬರೆದ 'ಗಗನಚುಕ್ಕಿ' ಎಂಬ ಕವನ ಸಂಕಲನದಿಂದ ಆಯ್ದ 'ಹೇಮಂತ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಸ್ವಾರಸ್ಯ:** ಹೇಮಂತ ಋತುವಿನ ಕಾಲದಲ್ಲಿ ಪ್ರಕೃತಿಯಲ್ಲಿ ಜಡತ್ವವು ತುಂಬಿರುತ್ತದೆ. ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿವೆ. ಪ್ರಕೃತಿಯ ತಟಾವಸ್ಥೆಯು ಇಲ್ಲಿಯ ಸ್ವಾರಸ್ಯವಾಗಿದೆ.

೩. ಕಣ್ಣೀರು ಸುರಿಸುತ್ತಿದೆ ಕಾನನದ ಹಕ್ಕಿ

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎಸ್. ವಿ. ಪರಮೇಶ್ವರ ಭಟ್ಟರು ಬರೆದ 'ಗಗನಚುಕ್ಕಿ' ಎಂಬ ಕವನ ಸಂಕಲದಿಂದ ಆಯ್ದ 'ಹೇಮಂತ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸ್ವಾರಸ್ಯ:** ಹೇಮಂತ ಋತುವಿನಲ್ಲಿ ಮಂಜು ತುಂಬಾ ಬೀಳುತ್ತಿರುತ್ತದೆ. ಮರ ಗಿಡಗಳು ಬೋಳಾಗಿರುತ್ತದೆ. ಹಕ್ಕಿಗಳು ಹಾರುವದನ್ನು ಕಡಿಮೆ ಮಾಡಿ

ಕಣ್ಣೀರನ್ನು ಸುರಿಸಿ ದುಃಖ ಪಡುತ್ತದೆ ಎನ್ನುವುದು ಇಲ್ಲಿಯ ಸ್ವಾರಸ್ಯ.

ಳ. ಎತ್ತಲುಂ ನಡುಗುತಿಹ ನೀರವಾಲೋಕ

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎಸ್. ವಿ. ಪರಮೇಶ್ವರ ಭಟ್ಟರು ಬರೆದ 'ಗಗನಚುಕ್ಕಿ' ಎಂಬ ಕವನ ಸಂಕಲದಿಂದ ಆಯ್ದ 'ಹೇಮಂತ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸ್ವಾರಸ್ಯ:** ಹೇಮಂತ ಋತುವಿನಲ್ಲಿ ಮಂಜು ಬೀಳುತ್ತಿರುತ್ತದೆ, ಎಲ್ಲೆಲ್ಲೂ ತುಂಬಾ ಚಳಿ. ಈ ಕಾಲದಲ್ಲಿ ಪ್ರಕೃತಿಯಲ್ಲಿ ಜಡತ್ವ ಆವರಿಸಿ ನೀರವ ಮೌನ ತುಂಬಿರುತ್ತದೆ ಎಂಬುದು ಸ್ವಾರಸ್ಯವಾಗಿದೆ.

FOR KANNADA

ಱ. ಅದಕೆ ತಲೆಬಾಗುವುದೆ ಸೃಷ್ಟಿಯೊಳಮರ್ಮ

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎಸ್. ವಿ. ಪರಮೇಶ್ವರ ಭಟ್ಟರು ಬರೆದ 'ಗಗನಚುಕ್ಕಿ' ಎಂಬ ಕವನ ಸಂಕಲದಿಂದ ಆಯ್ದ 'ಹೇಮಂತ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸ್ವಾರಸ್ಯ:** ಹೇಮಂತ ಋತುವಿನ ಜಡತ್ವ ಸೃಷ್ಟಿಯ ಮರ್ಮ. ಈ ಋತುವಿನ ಕಠಿಣ ಶಾಸನಕ್ಕೆ ನಾವು ತಲೆಬಾಗಬೇಕು. ಹೊಸ ಋತುವಿಗಾಗಿ ಕಾಯಬೇಕು ಎಂಬುದು ಇಲ್ಲಿಯ ಸ್ವಾರಸ್ಯ.

**ಉ. ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಸಿಂಗರ : ಸಿಂಗಾರ :: ಮರುತ : ಮಾರುತ

೨. ಮೌನ : ಮಾತು :: ಜಡ : ಚೇತನ

೩. ಬನ : ವನ :: ಮೊಗ : ಮುಖ

೪. ಚಿಗುರಲೆ : ಲೋಪಸಂಧಿ :: ತಲೆವಾಗು : ಆದೇಶಸಂಧಿ

೫. ನೀರವ : ಮೌನ :: ಕಠಿಣ : ಕ್ಲಿಷ್ಟ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ